


ಎಡದಿಂದ ಬಲಕ್ಕೆ:

1. ಫಲಾಹಾರ ಒದಗಿಸಲಿಲ್ಲವೆಂದು ಏಟು (3)
3. ಅಲಂಕಾರಿಕವಾಗಿದೆ, ಅಂಕಿ–ಅಂಶ ನಿರೂಪಿಸುವ ನಕ್ಷೆ (3)
4. ಎಲ್ಲವನ್ನೂ ಕೆಡಿಸುತ್ತಾನೆ, ಮುಂಗೋಪಿ (3)
6. ಕರಕುಶಲ ವಿದ್ಯೆಯನ್ನು ಕಾಪಾಡುವವ ಈತ (3)
7. ಕಾವಿಯನ್ನೇಕೆ ಧರಿಸಿದ ಈ ಗಣೇಶ? (4)
9. ಭಾವನ ಆನಂದ–ಪ್ರಾಪಂಚಿಕ ನೆಂಟಸ್ತನ (4)
11. ಭಾರತ ಪ್ರವಚನಕ್ಕೆ ಮೊದಲು 'ಬೆಳಗಿನ ಸ್ತೋತ್ರ' (4)
13. ಪರಮಾರ್ಥದ ಮಾತಿನಲ್ಲಿ 'ಲಕ್ಷ್ಮಿಯ ಒಡೆಯ' (4)
15. ಆಕೆ ಸುಮ್ಮನಿದ್ದರೆ ಕೋಪವೆಂದೇ ಅರ್ಥ (3)
17. ಕೋರಿ ಕೋರಿ ಪಡೆದ ವಸ್ತು ಕಪ್ಪು ಬಣ್ಣದ್ದು (3)
18 ಅವನ ಮೂರ್ಖತನ ಕಂಡು ಅಯ್ಯೋ ಪಾಪ! (3)
19. ದಕ್ಷಿಣ ದಿಕ್ಕಿನಲ್ಲಿ ಭಾರೀ ಸೆಣಸಾಟ (3)

ಮೇಲಿಂದ ಕೆಳಕ್ಕೆ:

1. ಪ್ರಸಾದದಲ್ಲಿ ಖಾರ ತುಂಬ ತೀಕ್ಷ್ಣವಾಗಿದೆ (3)
2. ಅಲ್ಲಿಗೆ ಕರೆಸಿದ್ದವ ಭಾರೀ ವಿಲಾಸಪ್ರಿಯ (3)
3. ಅಹಲ್ಯೆಯ ವಾಸಕ್ಕಾಗಿ ಇದೇ ಮನೆ (3)
5. ಕಂಕಣವನ್ನೇಕೆ ಕಿತ್ತ? ಅವನು ಪೆದ್ದ (3)
7. ಶ್ರಮವಹಿಸು, ನಂತರ ವಿಶ್ರಾಂತಿ ತೆಗೆದುಕೋ (4)
8. ಕಲಿತವನಂತಿಲ್ಲ. ಆದರೆ ಲಲಿತ ಕಲೆ ಬಲ್ಲವ (4)
9. ಬೆಂಕಿಯ ಈ ಆಕಾರ, ಹೆದರಿಕೆ ಬರಿಸುವಂತಿದೆ (4)
10. ಪದ್ಧತಿ ಏನೇ ಇರಲಿ, ಅವನೇ ಕುಬೇರ (4)
12. ಭುಜಕ್ಕೇರಿಸಿದ ವಸ್ತುಗಳನ್ನು ಭಾಗಮಾಡುವವನೀತ (3)
14. ಮಂದಾಕಿನೀ ನದಿಯ ಪರಿಸರ– ಮತ್ತು ಬರಿಸುವಂತಿದೆ (3)
15. ಮುಂದಕ್ಕೇನಿದೆ? ಅವನೂ ಒಬ್ಬ ವೃದ್ಧ (3)
16. ಮನವನ್ನರಳಿಸುವಷ್ಟು ಸುಂದರ ಹೂವು (3)

## ಪದಬಂಧ 10-11-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಉಪಾಸನೆ; 3. ವಿರೂಪ; 4. ನವೀನ; 6. ಅಂಧಕಾರ; 7. ಸುಧಾಕರ; 9. ನರಾಧಮ; 12. ಅವನತಿ; 14. ಶಿವಂಗಿ; 15. ರಾಜೀವ; 16. ಡಮರುಗ.

ಮೇಲಿಂದ ಕೆಳಕ್ಕೆ:

1. ಉಪಕಾರ; 2. ನೆನಪಿಸು; 3. ವಿವಿಧ; 5. ನಡುಕ; 6. ಅಂತರ್ದಾನ; 8. ರತ್ನಕಾಂತಿ; 10. ರಾಕ್ಷಿಸಿ; 11. ಮರಗಿಡ; 12. ಅನುರಾಗ; 13. ನದವ ('ವದನ' ತಲೆ ಕೆಳಗು)

# ಪರ್ವತ–ಅದ್ಭುತ

## ಯಾವ ಪರ್ವತ–ಅತ್ಯಂತ ಉದ್ದ?

ಅದು ಯಾವುದೇ ಆಗಿರಲಿ, ಮೊದಲ ವಿಸ್ಮಯ ಏನೆಂದರೆ ಆ ಪರ್ವತ ಅಗೋಚರ. ಏಕೆಂದರೆ ಅದು ಸಾಗರದಲ್ಲಿ ಮುಳುಗಿ ನಿಂತಿದೆ! ಎರಡನೆಯ ವಿಸ್ಮಯ ಏನೆಂದರೆ ಅದರ ಉದ್ದ ನೆಲದ ಮೇಲಿನ ಅತ್ಯುದ್ದದ ಪರ್ವತ ಪಂಕ್ತಿಯ ಇಮ್ಮಡಿಗಿಂತ ಅಧಿಕ!

ಆ ಅದ್ಭುತ ಪರ್ವತದ ಹೆಸರು 'ಮಿಡ್ ಅಟ್ಲಾಂಟಿಕ್ ರಿಡ್ಜ್' ಹೆಸರೇ ಸೂಚಿಸುವಂತೆ ಈ ಪರ್ವತ ಸಾಲು ಅಟ್ಲಾಂಟಿಕ್ ಮಹಾಸಾಗರದಲ್ಲಿದೆ. ಅಟ್ಲಾಂಟಿಕ್‌ನ ಉತ್ತರದ ತುದಿಯಿಂದ ದಕ್ಷಿಣದ ತುದಿವರೆಗೂ ಸಾಗರದ ತಳದ ನೆಲದ ಮೇಲೆ ಈ ಅದ್ಭುತ ಪರ್ವತ ಹಬ್ಬಿದೆ (ಭೂಪಟದಲ್ಲಿನ ಕೆಂಪು ಪಟ್ಟೆಯನ್ನು ಗಮನಿಸಿ). ಅಂಕು ಡೊಂಕಾಗಿ ಹರಡಿರುವ ಈ ಪರ್ವತ ಪಂಕ್ತಿಯ ಒಟ್ಟು ಉದ್ದ ಸಮೀಪ ಹದಿನಾರು ಸಾವಿರ ಕಿ.ಮೀ.! ನೆಲದ ಮೇಲಿನ ಅತಿ ದೀರ್ಘ ಪರ್ವತ ಶ್ರೇಣಿಗಳಾದ ಆ್ಯಂಡಿಸ್ (ಉದ್ದ 7200 ಕಿ.ಮೀ.), ರಾಖೀಸ್ (6000 ಕಿ.ಮೀ.), ಹಿಮಾಲಯ (3800 ಕಿ.ಮೀ.) ದಿ ಗ್ರೇಟ್ ಡಿವೈಡಿಂಗ್ ರೇಂಜ್ (3600 ಕಿ.ಮೀ.)ಗಳ ಉದ್ದಗಳೊಡನೆ ಹೋಲಿಸಿ ನೋಡಿ.



ಧರೆಯ ಈ ಅತ್ಯಂತ ದೀರ್ಘ ಪರ್ವತ ಶ್ರೇಣಿ ಸಾಗರಾಂತಸ್ಥವಾಗಿದ್ದರೂ ಅದರ ಒಡಲು ಪ್ರಶಾಂತವಾಗೇನಿಲ್ಲ. ಪಶ್ಚಿಮದಲ್ಲಿ ಉತ್ತರ–ದಕ್ಷಿಣ ಅಮೆರಿಕ ಖಂಡಗಳನ್ನು ಹೊತ್ತಿರುವ ಹಾಗೂ ಪೂರ್ವದಲ್ಲಿ ಆಫ್ರಿಕ ಮತ್ತು ಯುರೋಪಿಯಾಗಳನ್ನು ಹೊತ್ತಿರುವ ಶಿಲಾಫಲಕಗಳು ಎದುರು ಬದುರು ಸಂಧಿಸಿರುವ ಬಿರುಕಿನುದ್ದಕ್ಕೂ 'ಮಿಡ್ ಅಟ್ಲಾಂಟಿಕ್ ರಿಡ್ಜ್' ಮೈದಳೆದು ನಿಂತಿದೆ. ಈ ಫಲಕಗಳು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ವರ್ಷಕ್ಕೆ ಸುಮಾರು ಐದು ಸೆಂ.ಮೀ. ನಷ್ಟು ಸರಿಯುತ್ತಿವೆ. ಹಾಗಾಗಿ ಈ ಪರ್ವತದುದ್ದಕ್ಕೂ ಭೂಕಂಪ–ಜ್ವಾಲಾಮುಖಿ ಚಟುವಟಿಕೆ ವಿಪರೀತ. ಫಲಕಗಳು ಸರಿದಂತೆಲ್ಲ ಭೂ ಕವಚದಿಂದ ಶಿಲಾಪಾಕ ಹೊರಬರುತ್ತ ಹರಡುತ್ತ ಈ ಪರ್ವತದ ಅಗಲವನ್ನು ಅಧಿಕಗೊಳಿಸುತ್ತ ಇಡೀ ಅಟ್ಲಾಂಟಿಕ್ ಮಹಾಸಾಗರವನ್ನೇ ಅಗಲಿಸುತ್ತಿದೆ. ಹೇರಳ ಶಿಖರಗಳಿಂದಲೂ, ಹತ್ತಾರು ಕಿ.ಮೀ. ಅಗಲದ ಕಣಿವೆಗಳಿಂದಲೂ ಕೂಡಿರುವ ಈ ಪರ್ವತ ಪಂಕ್ತಿ ಕೆಲವಾರು ಕಡೆ ಕಡಲಿಂದ ಹೊರಕ್ಕೂ ತಲೆ ಹಾಕಿದೆ. ಅಂಥ 'ಶಿರ'ಗಳು ದ್ವೀಪಗಳಾಗಿವೆ. ಸುಪ್ರಸಿದ್ಧ ಐಸ್ ಲ್ಯಾಂಡ್, ಎಜೋರ್ಸ್ ಇತ್ಯಾದಿ ಇಂತಹ ದ್ವೀಪಗಳೇ. ಸಹಜವಾಗಿಯೇ ಇಂಥ ದ್ವೀಪಗಳಲ್ಲಿ ಜ್ವಾಲಾಮುಖಿಗಳು ಕುದಿಜಲದ ಚಿಲುಮೆಗಳು ಹೇರಳ. ಉದಾಹರಣೆಗೆ ಐಸ್‌ಲ್ಯಾಂಡ್ ಒಂದರಲ್ಲೇ ಒಂದು ನೂರಕ್ಕೂ ಅಧಿಕ ಅಗ್ನಿಪರ್ವತಗಳಿವೆ; ಏಳು ನೂರಕ್ಕಿಂತ ಹೆಚ್ಚು ಬಿಸಿ ಜಲದ ಚಿಲುಮೆಗಳಿವೆ.

ಎಂಥ ಪರ್ವತ! ಎಷ್ಟು ಅದ್ಭುತ!

■ ಎನ್. ವಾಸುದೇವ್